ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿರುವುದಿಲ್ಲ.

ಆ) ಕುಣಿಗಲ್ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆ ಯೋಜನೆ ಅಡಿಯಲ್ಲಿ ರೂ. 1067.67 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಸದರಿ ರಸ್ತೆಗಳ ನಿರ್ವಹಣೆಗಾಗಿ ಅನುಕ್ರಮವಾಗಿ ರಾಜ್ಯ ಹೆದ್ದಾರಿ ಗಳಿಗೆ ರೂ. 44.24 ಲಕ್ಷಗಳ ಅನುದಾನವನ್ನು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಿಗೆ ರೂ.43.18 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಹಾಗೂ ಈ ನಿರ್ವಹಣಾ ಅನುದಾನದಡಿ 93.06 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ಮತ್ತು 253.95 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ನಿರ್ವಹಣೆ ಮಾಡಲಾಗಿದೆ.

ಸಹಕಾರ ಗ್ರಾಹಕರ ಮಹಾ ಮಂಡಳಿಯ ಶಾಖೆಗಳು

550 (635) ಶ್ರೀ ಎ.ಬಿ.ರಮೇಶ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳಿಯ (ಕೆ.ಸಿ.ಸಿ.ಎಫ್) ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಶಾಖೆಗಳು ಎಷ್ಟು;

ಆ) ಈ ಶಾಖೆಗಳ ಪೈಕಿ ಎಷ್ಟು ಲಾಭದಲ್ಲಿವೆ ಹಾಗೂ ಎಷ್ಟು ನಷ್ಟದಲ್ಲಿವೆ (ಪೂರ್ಣ ಮಾಹಿತಿ ನೀಡುವುದು);

ಇ) ಕೆಂಪೇಗೌಡ ರಸ್ತೆಯಲ್ಲಿ ಕೆ.ಸಿ.ಸಿ.ಎಫ್.ನ ಶಾಖೆ ಕಾರ್ಯನಿರ್ವ ಹಿಸುತ್ತಿರುವುದೇ; ಇದರ ಪ್ರಧಾನ ವ್ಯವಸ್ಥಾಪಕರು ಯಾವ ದರ್ಜೆಯ ಹಾಗೂ ಯಾವ ಇಲಾಖೆಯ ಅಧಿಕಾರಿಯಾಗಿರುತ್ತಾರೆ.

ಈ) ಈ ಅಧಿಕಾರಿ ಬೇರೆ ಯಾವುದಾದರೂ ಹುದ್ದೆಯಲ್ಲಿ ಸಮಾನಾಂತರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ; ಹಾಗಿದ್ದಲ್ಲಿ ಯಾವ ದಿನಾಂಕದಿಂದ ಈ ಹುದ್ದೆಯನ್ನು ನಿರ್ವಹಿಸುತ್ತಿರುತ್ತಾರೆ?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) 19.

ಆ) ಲಾಭದಲ್ಲಿರುವ ಶಾಖೆಗಳು– 18

ನಷ್ಟದಲ್ಲಿರುವ ಶಾಖೆಗಳು– 01

(ಮಾಹಿತಿಯನ್ನು ಲಗತ್ತಿಸಿದೆ)

ಇ) ಕೆಂಪೇಗೌಡ ರಸ್ತೆಯಲ್ಲಿ ಕೆ.ಸಿ.ಸಿ.ಎಫ್.ನ ಶಾಖೆ ಕಾರ್ಯನಿರ್ವ ಯಿಸುತ್ತಿದೆ. ಇದರ ಪ್ರಧಾನ ವ್ಯವಸ್ಥಾಪಕರು 'ಎ' ದರ್ಜೆ ಅಧಿಕಾರಿಯಾಗಿದ್ದು, ಸದರಿಯವರು ಸಹಕಾರ ಸಂಘಗಳ ಉಪ ನಿಬಂಧಕರ ವೃಂದದ ಸಹಕಾರ ಇಲಾಖೆಯ ಅಧಿಕಾರಿಯಾಗಿರುತ್ತಾರೆ.

ಈ) ಇಲ್ಲ.

ಪ್ರಸ್ತುತ ಶ್ರೀ .ಬಿ.ಆರ್.ಲಿಂಗರಾಜು ಸಹಕಾರ ಸಂಘಗಳ ಉಪ ನಿಬಂಧಕರು. ಸದರಿ ಹುದ್ದೆಯಲ್ಲಿ ದಿನಾಂಕ: 04–01–2010 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿಯವರು ಈ ಹುದ್ದೆಯ ಹೊರತಾಗಿ ಬೇರೆ ಯಾವುದೇ ಸಮನಾಂತರವಾದ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ.

ಅನುಬಂಧ

ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳಿಯ ಲಾಭ ಹಾಗೂ ನಷ್ಟದಲ್ಲಿನ ಶಾಖೆಗಳ ವಿವರ

(2008–09ರ ತಾತ್ಕಾಲಿಕ ಆಸ್ತಿ ಜವಾಬ್ದಾರಿ ತಃಖ್ತೆಯ ರೀತ್ಯಾ)

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಶಾಖೆಯ ಹೆಸರು		ನಿವ್ವಳ ಲಾಭ	ನಿವ್ವಳ ನಷ್ಟ
-	ಬೆಂಗಳೂರು ನಗರದಲ್ಲಿನ ಜನತಾ ಬಜಾರ್‌ಗಳು			
1	ಜನತಾ ಬಜಾರ್	ಕೆಂಪೇಗೌಡ ರಸ್ತೆ	31.20	—
2	ಜನತಾ ಬಜಾರ್	ಜಯನಗರ	0.63	—
3	ಜನತಾ ಬಜಾರ್	ಸದಾಶಿವನಗರ	2.00	—
4	ಜನತಾ ಬಜಾರ್	ನಂದಿದುರ್ಗ	1.56	—
5	ಜನತಾ ಬಜಾರ್	ಸಂಜಯನಗರ	0.81	—
6	ಜನತಾ ಬಜಾರ್	ಹೆಚ್.ಎ.ಎಲ್	—	2.13
7	ಜನತಾ ಬಜಾರ್	ಬಸವೇಶ್ವರ ನಗರ	7.34	—
ಇತರೆ ನಗರದಲ್ಲಿನ ಜನತಾ ಬಜಾರ್‌ಗಳು				
8	ಜನತಾ ಬಜಾರ್	ಮಂಡ್ಯ	2.24	—
9	ಜನತಾ ಬಜಾರ್	ತುಮಕೂರು	1.34	—
10	ಜನತಾ ಬಜಾರ್	ಚಿತ್ರದುರ್ಗ	1.97	—

11	ಜನತಾ ಬಜಾರ್	ಹುಬ್ಬಳ್ಳಿ	3.22	---
12	ಜನತಾ ಬಜಾರ್	ಚಾಮರಾಜನಗರ	6.07	---
ಕರ್ನಾಟಕ ಸಹಕಾರಿ ಗ್ರಾಹಕರ ಮಹಾಮಂಡಳ ಪ್ರಾದೇಶಿಕ ಶಾಖೆಗಳು				
13	ಕ.ಸ.ಗ್ರಾ.ಮ. ಶಾಖೆ	ಹೊಸಪೇಟೆ	7.02	---
14	ಕ.ಸ.ಗ್ರಾ.ಮ. ಶಾಖೆ	ಕಾರವಾರ	0.84	---
15	ಕ.ಸ.ಗ್ರಾ.ಮ. ಶಾಖೆ	ಚಿಕ್ಕಬಳ್ಳಾಪುರ	1.55	---
16	ಕ.ಸ.ಗ್ರಾ.ಮ. ಶಾಖೆ	ಹಾಸನ	1.40	---
17	ಕ.ಸ.ಗ್ರಾ.ಮ. ಶಾಖೆ	ಮೈಸೂರು	1.41	---
18	ಕ.ಸ.ಗ್ರಾ.ಮ. ಶಾಖೆ	ಕೋಲಾರ	2.24	---
19	ಕ.ಸ.ಗ್ರಾ.ಮ. ಶಾಖೆ	ಬಾಗಲಕೋಟೆ	0.19	---
		ಕೇಂದ್ರ ಕಛೇರಿ	35.71	---
		ಒಟ್ಟು	**108.74**	**2.13**

ರಾಜ್ಯ ಹೆದ್ದಾರಿ ದುರಸ್ತಿ

551 (769) ಶ್ರೀ ರವಿ. ಸಿ.ಟಿ. (ಚಿಕ್ಕಮಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ಮಂಗಳೂರು ರಾಜ್ಯ ಹೆದ್ದಾರಿ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ಅಭಿವೃದ್ಧಿಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಯಾವಾಗ ಅಭಿವೃದ್ಧಿ ಪಡಿಸಲಾಗುವುದು; ಹೇಗೆ ಅಭಿವೃದ್ಧಿಪಡಿಸಲಾಗುವುದು (ವಿವರ ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕಡೂರು ಮಂಗಳೂರು ಹೆದ್ದಾರಿಯು ಕಡೂರು ಕಾಂಗಾಡ್ ರಾಜ್ಯ ಹೆದ್ದಾರಿ ಸಂಖ್ಯೆ:64 ಎಂಬುದಾಗಿ ನಾಮಾಂಕಿತಗೊಂಡಿದ್ದು ಒಟ್ಟಾರೆ 165.80 ಕಿಮೀ ಗಳಷ್ಟು ಉದ್ದವಿದ್ದು ಚಿಕ್ಕಮಗಳೂರು ಜಿಲ್ಲೆಯಲ್ಲಿ 99.27